


### ಹಣಕ್ಕೆ ಕಿಮ್ಮತ್ತಿಲ್ಲದ ಕುದುರೆ ಜೂಜು

ಕುದುರೆ ಹುಚ್ಚು (ಜುಲೈ 15) ಡಿ. ರವಿಕುಮಾರ್ ಚಿತ್ರ–ಲೇಖನ ಅಭೂತಪೂರ್ವವಾಗಿ ಮೂಡಿ ಬಂದಿದೆ. ಹುಚ್ಚೆದ್ದ ಕುದುರೆಗಳಿಂದ ಎಷ್ಟು ಬೇಗ ಗಳಿಸಬಹುದೋ, ಅಷ್ಟು ಬೇಗ ಕಳೆದುಕೊಳ್ಳಬಹುದು. ಒಟ್ಟಿನಲ್ಲಿ ಇಲ್ಲಿ ಹಣಕ್ಕೆ ಕಿಮ್ಮತ್ತಿಲ್ಲ!

–ಎಚ್.ಎನ್.ವಿಶ್ವನಾಥ್, ಶಿವಮೊಗ್ಗ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಶ್ರೀಮಂತರಿಗೆ ಸಲಹೆ!

ಅನಾಯಾಸವಾಗಿ ಬಂದ ಹಣ ಖರ್ಚು ಮಾಡುವುದು ಹೇಗೆ ಎಂಬ ಚಿಂತೆ ಕೆಲವರದು. ಅಂತಹವರಿಗೆ ನಿಮ್ಮ ಶ್ರೀಮಂತಿಕೆ ಉಡಾಯಿಸಲು ಕುದುರೆ ಬಾಲಕ್ಕೆ ಹಣಕಟ್ಟಿ ಎಂಬ ಸಲಹೆ ನೀಡಿದಂತಾಗಿದೆ. ಲೇಖನ ಏಕಮುಖವಾಗಿದೆ. ಕುದುರೆ ಜೂಜಿನಿಂದ ಅನಾಥರಾದ ಕುಟುಂಬದ ಕಥೆಯನ್ನೂ ಹೇಳಬೇಕಿತ್ತು.

–ಕೋಟೀಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ಎಂ.ಜಿ.ಆರ್.ಶೇಖರ್, ದೊಡ್ಡಬಳ್ಳಾಪುರ

### ಬೋಳುತಲೆಯ ದುರದೃಷ್ಟ!

'ಸಮುದ್ರಕ್ಕೆ ಬೇಕಂತೆ ತಲೆ ಗೂದಲು!' (ಎಂ.ಬಿ. ನಾಯ್ಕ್). ಕೇಶದಾನ ಮಾಡಿ ಪುಣ್ಯ ಕಟ್ಟಿಕೊಳ್ಳುವ ಏಕೈಕ ಮಾರ್ಗವೂ ಇಲ್ಲ– ಬೋಳು ತಲೆಯವರಿಗೆ! 'ಕೇಶ–ವ'ರೇ ಧನ್ಯರು!

–ಸಿಪಿಕೆ, ಮೈಸೂರು

### ವಿಪುಲ ಜ್ಞಾನ, ಮನರಂಜನೆ

'ಸುಧಾ' ಹುಟ್ಟಿದಂದಿನಿಂದ ಅವಳ ನಂಟು ಬೆಳೆಸಿಕೊಂಡವ ನಾನು. ಹೊಸ 'ಸುಧಾ' ಕೈಗೆ ಬಂದಾಗ ಬೇರೆ ಯಾವುದರ ಕಡೆಗೂ ಗಮನ ಹೋಗುವುದಿಲ್ಲ. ಒಂದು ಲೋಟ ಕಾಫಿಯ ಬೆಲೆಗೆ ಎಷ್ಟೊಂದು ವಿಪುಲ ಜ್ಞಾನ, ಮನರಂಜನೆ, ಚಿಂತನೆಗಳ ಮಹಾಪೂರ. ಬೇರೆಲ್ಲ ನಿಯತಕಾಲಿಕಗಳು ವ್ಯಾಪಾರಿ ಸರಕಾಗಿ ಕಂಡರೆ ನಮ್ಮ ನೆಚ್ಚಿನ 'ಸುಧಾ' ಕಾಪಿಡುವ ನಿಧಿಯಾಗಿ ಮೆಚ್ಚುಗೆಯಾಗುತ್ತಾಳೆ.

ನಾನು ಮನೆಯಿಂದ ದೂರವಿದ್ದಾಗ ನನ್ನ ಸೊಸೆ 'ಸುಧಾ' ಸಂಚಿಕೆಗಳನ್ನು ಕಾದಿಟ್ಟು, ನಾನು ಮರಳಿದಾಗ ಅದರಲ್ಲಿ ಒಂದು ಸಂಚಿಕೆ ಕಣ್ತಪ್ಪಿಕೊಂಡರೂ ತಳಮಳವಾಗುತ್ತದೆ. ಹಾಗೇ ಒಮ್ಮೆ ಮಧ್ಯದ ಸಂಚಿಕೆಯೊಂದು ಕಾಣೆಯಾಗಿ ನಾನು ಚಡಪಡಿಸಿದ್ದನ್ನು ಗಮನಿಸಿದ ಸೊಸೆ ತನ್ನ ತಪ್ಪಿಗಾಗಿ ಪರಿತಪಿಸಿದಳು. 'ಸುಧಾ' ಹೊತ್ತು ತರುವ ಸಾಮಗ್ರಿಯೇ ವಿಶಿಷ್ಟ, ಅನನ್ಯ.

ಸುಧಾಳಿಗೆ ಸುಧಾಳೇ ಸಾಟಿ. ಮಾತೇ ಮುತ್ತು, ವಿಚಾರ ಲಹರಿ, ವೈಜ್ಞಾನಿಕ ಲೇಖನಗಳು, ಎಳೆಯರ ಅಂಗಳ. ನಗೆಹನಿ, ಜಾಣರ ಪೆಟ್ಟಿಗೆ– ಅಬ್ಬಾ ಎಂತಹ ವೈವಿಧ್ಯತೆ? ನಾನು ಕನ್ನಡನಾಡಿನಲ್ಲಿ ಹುಟ್ಟಿದ್ದು ಸಾರ್ಥಕವೆನಿಸಿತು.

–ಕೇಶವ ಪ್ರಭು, ಶಿವಮೊಗ್ಗ

### ವಿದ್ಯಾರ್ಥಿಗಳಿಗೆ ಸಮಯವೆಲ್ಲಿ?

'ವಿದ್ಯಾರ್ಥಿಗಳ ಏಕಾಗ್ರತೆಗೆ ಯೋಗ' (ಗೋಪಾಲ ಕೃಷ್ಣ ದೇಲಂಪಾಡಿ) ಸರಿ. ಏಕಾಗ್ರತೆಯಿಂದ ಮಕ್ಕಳು ವಂಚಿತರಾಗಿದ್ದಾರೆ. ಆದರೆ ಯೋಗ ಮಾಡಲಿಕ್ಕೆ ಸಮಯವೆಲ್ಲಿದೆ?

–ರಾಜೇಂದ್ರ ಕುಮಾರ್, ದೊಡ್ಡಬಳ್ಳಾಪುರ/ ನಾಗರಾಜ ಬಣಕಾರ, ಕೊಟ್ಟೂರು

### ತುಂಗೆಯೂ ಗಂಗೆಯಂತಾಗಬಹುದು?

ವಿಚಾರ ಲಹರಿ ಅಂಕಣದಲ್ಲಿ ತುಂಗೆಯ ಬಗ್ಗೆ ಪ್ರಸ್ತಾಪಿಸಿರುವದು ಸರಿ. ಆದರೆ ತುಂಗೆಗೆ ದಿನಾಲೂ ಕಾರ್ಖಾನೆಗಳ ತ್ಯಾಜ್ಯ ರಾಸಾಯನಿಕಗಳು, ಶಿವಮೊಗ್ಗ ಚರಂಡಿ ನೀರು, ಪ್ಲಾಸ್ಟಿಕ್ ಅಪಾರ ಪ್ರಮಾಣದಲ್ಲಿ ಸೇರುತ್ತವೆ. ಇದನ್ನು ನಿಯಂತ್ರಿಸದಿದ್ದರೆ ಕೆಲವೇ ವರ್ಷಗಳಲ್ಲಿ ತುಂಗೆ ಗಂಗೆಗಿಂತಲೂ ಮಲಿನವಾಗಬಹುದು.

–ಮಹಾವೀರ ಕಾಸರ, ಚನ್ನಗಿರಿ/ ಸರ್ವಜಿತ, ನವನಗರ

### ಸುಖೀಭವದಲ್ಲಿ ಸಮಂಜಸ ಉತ್ತರ

ಡಾ. ವಿನೋದ ಛೆಬ್ಬಿಯವರು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರಿಸುತ್ತಾ ಬಂದಿದ್ದಾರೆ. ಕೆಲವರು ಇವರ ದೃಷ್ಟಿಕೋನ ಹೇಗಿರಬಹುದು ಎಂಬುದನ್ನು ಪರೀಕ್ಷಿಸಲು ಬೇಕು ಬೇಕೆಂತಲೆ ಪ್ರಶ್ನೆಗಳನ್ನು ಸೃಷ್ಟಿಸಿರಲಿಕ್ಕೆ ಸಾಕು! ಆ ಪ್ರಶ್ನೆಗಳಿಗೂ 'ಇಗೋ ಉತ್ತರ ಹೀಗಿದೆ ನೋಡಿ' ಎಂದು ಮುಖಕ್ಕೇ ಹಿಡಿದಿದ್ದಾರೆ.

ಹೀಗೆ ಕೇಳುವ ಏನೆಲ್ಲ ಪ್ರಶ್ನೆಗಳಿಗೂ ಕೇವಲಾರ್ಥ ಬರುವಂತೆ ಎಂದೂ ಮಾಡದೆ, ಎಲ್ಲವನ್ನು ಸಮಂಜಸ ಉತ್ತರಕ್ಕೆಡೆ ಮಾಡುತ್ತಿರುವ ಡಾ. ಛೆಬ್ಬಿಯವರು ನಿಜಕ್ಕೂ ಅಭಿನಂದನಾರ್ಹರು.

–ಶಂಕರೇಗೌಡ ತುಂಬಕೆರೆ, ಮಂಡ್ಯ

### ವಿಷ್ಣು ಹೆಸರು ಬಳಕೆಯ ಹುನ್ನಾರ

ವಿಷ್ಣುವರ್ಧನ್ ಸಾವಿಗೆ ನಾಗವಲ್ಲಿಯ ಆತ್ಮವೇ ಕಾರಣವೆಂಬ ಗಾಳಿ ಸುದ್ದಿ ಹಬ್ಬಿಸಿ ಆಪ್ತರಕ್ಷಕ ಚಿತ್ರ ಭರ್ಜರಿಯಾಗಿ ಹಣ ದೋಚಿತು. ಈಗ ಅವರ ಹೆಸರು ಬಳಸಿಕೊಂಡು ಕಿಸೆ ತುಂಬಿಕೊಳ್ಳಲು ದ್ವಾರಕೀಶ್ ಯತ್ನಿಸುತ್ತಿದ್ದಾರೆ. ಯಜಮಾನನನ್ನು ಬಯಲಿನಲ್ಲಿ ನಿಲ್ಲಿಸಿದ ಕುರಿತ ರಚಹ ಬರಹ ಸೂಕ್ತವಾಗಿದೆ.

–ನಾಗದೇವಾಡಿಗ, ಕುಂದಾಪುರ

### ಅರ್ಥಪೂರ್ಣ ಕಾರ್ಟೂನ್

ಮಹಮ್ಮದ್‌ರವರ ಕಾರ್ಟೂನ್ ಅರ್ಥಪೂರ್ಣ. ಇನ್ನು ಮುಂದಾದರೂ ಆಡಳಿತ ನಡೆಸುತ್ತಿರುವವರು ಜನತೆಯ ಕಷ್ಟ, ನಷ್ಟಗಳಿಗೆ ಸಹಾಯ ಮಾಡುವತ್ತ ಮನಸ್ಸು ಮಾಡಬೇಕು.

–ಎಂ.ಎಲ್. ಲಕ್ಷ್ಮಣರಾವ್, ದಾವಣಗೆರೆ

### ಮನರಂಜನೆ ಜತೆಗೆ ಅರಿವು

'ಸುಧಾ' ಪತ್ರಿಕೆಯಲ್ಲಿ ಸರಳವಾದ ಭಾಷೆಯಲ್ಲಿ ಚಿಕ್ಕ ಚೊಕ್ಕ ಲೇಖನಗಳು ಪ್ರಕಟವಾಗುತ್ತವೆ. ಇದರಿಂದ ಜನತೆಗೆ ಸಂತೋಷ, ಮನರಂಜನೆ ಜೊತೆಗೆ ಅನೇಕ ವಿಷಯಗಳನ್ನೊಳಗೊಂಡ ಜ್ಞಾನ, ಅರಿವು ತಿಳುವಳಿಕೆ ನೀಡುವಲ್ಲಿ ಯಶಸ್ವಿಯಾಗಿದೆ.

–ಶರಣಪ್ಪ ಬಾಳಪ್ಪ ಚಲವಾದಿ, ಬೆನಹಾಳ (ರೋಣ ತಾ.)


